ಎಂ ವಿ ಸಿ ನಂಃ **137/2025**
ಪಿ ಡಬ್ಲ್ಯೂಃ **1**

<u>ದಿನಾಂಕಃ**18/11/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲು ಃ **3** ನೇ ಎದುರುದಾರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

ನಾನು ಗಗನ್ ರೆಸ್ಟೋರೆಂಟನ್ನು ನಡೆಸುತ್ತಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಸದರಿ ಗಗನ್ ರೆಸ್ಟೋರೆಂಟನ್ನು 15-20 ವರ್ಷಗಳಿಂದ ನಡೆಸಿರುತ್ತೇನೆ. ಗಗನ್ ಏಜೆನ್ಸಿ ಇದು ಪಾರ್ಲೆ-ಜಿ ಬಿಸ್ಕೇಟ್ ಗೆ ಸಂಬಂಧಿಸಿದ್ದು ಇರುತ್ತದೆ. ಈಗ ನಾನು ಸದರಿ ಗಗನ್ ರೆಸ್ಟೋರೆಂಟನ್ನು ನಡೆಸುತ್ತಿಲ್ಲ. ಸದರಿ ಗಗನ್ ರೆಸ್ಟೋರೆಂಟ್ ಬಾಳೆಹೊನ್ನೂರಿನಿಂದ ಬರುವ ಎನ್ ಆರ್ ಪುರ ರಸ್ತೆಯಲ್ಲಿ ಇರುತ್ತದೆ. ಸದರಿ ವ್ಯವಹಾರವನ್ನು ಕೋರೋನಾ ಮತ್ತು ಅಪಘಾತವಾದ ನಂತರ ನಿಲ್ಲಿಸಿರುತ್ತೇನೆ. ಕೋರೋನಾ ಸಮಯದಲ್ಲಿ ಉದ್ಯಮಕ್ಕೆ ಎಷ್ಟು ನಷ್ಟ ಉಂಟಾಗಿರುತ್ತದೆ ಎಂದರೆ ಸಾಕ್ಷಿ ವಾರ್ಷಿಕ ಆದಾಯದಲ್ಲಿ 5-6 ಲಕ್ಷ ರೂ. ನಷ್ಟ ಉಂಟಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಕೋವಿಡ್ 2019 ರಿಂದ 2021 ವರೆಗೆ ಇತ್ತು ಎಂದರೆ ಸರಿ.

2. ನನಗೆ ಉದ್ಯಮ ಹೊರತುಪಡಿಸಿ ಕೃಷಿ ಜಮೀನು ಇರುತ್ತದೆ. ಗಗನ್ ರೆಸ್ಟೋರೆಂಟ್ ಮತ್ತು ಗಗನ್ ಏಜೆನ್ಸಿಯಿಂದ ಬರುತ್ತಿದ್ದ ವರಮಾನದ ಬಗ್ಗೆ ಆದಾಯ ತೆರಿಗೆ ಕಟ್ಟುತ್ತಾ ಇದ್ದೆನು. ಸದರಿ ಉದ್ಯಮಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆಯನ್ನು 2017-18 ರಿಂದ 2021 ವರೆಗೆ ಪಾವತಿ ಮಾಡಿರುತ್ತೇನೆ. ಸದರಿ ಆದಾಯ ತೆರಿಗೆ ಪಾವತಿ ಮಾಡಿದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ಅಪಘಾತವಾದ ನಂತರ ಕೃಷಿ ಹಾಗೂ ಯಾವುದೇ ಉದ್ಯಮವನ್ನು ನಡೆಸುತ್ತಾ ಇರುವುದಿಲ್ಲ.

3. ಕೃಷಿ ಜಮೀನು ನನ್ನ ಹೆಸರಿನಲ್ಲಿರುತ್ತದೆ. ಸದರಿ ಜಮೀನು ಸಾಲೂರಿನಲ್ಲಿ ಇರುತ್ತದೆ. ಸದರಿ ತೋಟಕ್ಕೆ ಸೀಜನ್ ಇದ್ದಾಗ 8-10 ಕೆಲಸಗಾರರು ಕೆಲಸಕ್ಕೆ ಬರುತ್ತಾರೆ. ಉಳಿದ ಸಮಯದಲ್ಲಿ ನಾನೇ ಮಾಡಿಕೊಳ್ಳುತ್ತೇನೆ. ನನಗೆ ವಾರ್ಷಿಕ ಜಮೀನುಗಳಿಂದ 25-30 ಲಕ್ಷ ಆದಾಯ ಬರುತ್ತಾ ಇರುತ್ತದೆ. 2024-25 ನೇ ಸಾಲಿನಲ್ಲಿ 16 ಕ್ವಿಂಟಾಲ್ ಅಡಿಕೆ ಬಂದಿರುತ್ತದೆ. 2023-24 ನೇ ಸಾಲಿನಲ್ಲಿ ಸದರಿ ಜಮೀನಿನಿಂದ ಹೆಚ್ಚಿನ ಅಡಿಕೆ ಫಸಲು ಬಂದಿತ್ತು. ಅಪಘಾತವಾದ ನಂತರ ನನ್ನ ಕೃಷಿ ಜಮೀನಿನಿಂದ ಬರುವ ಆದಾಯದಲ್ಲಿ ಯಾವುದೇ ನಷ್ಟ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಅಪಘಾತವಾದ ದಿನ ಸಾಲೂರಿನಿಂದ ಎನ್ ಆರ್ ಪುರದ ಕಡೆಗೆ ಬರುತ್ತಿದ್ದೆನು. 1 ನೇ ಎದುರುದಾರರು ಆ ದಿನ ನನ್ನ ಎದುರುಗಡೆಗೆ ಕಾರನ್ನು ಚಲಾಯಿಸಿಕೊಂಡು ಬರುತ್ತಿದ್ದರು. ನಾನು ಆ ದಿನ ಸಾಲೂರು ಕಡೆಯಿಂದ ಎನ್ ಆರ್ ಪುರಕ್ಕೆ ಬರುತ್ತಿದ್ದೆನು. ಪೊಲೀಸರು ಹಾಜರುಪಡಿಸಿರುವ ನಕಾಶೆಯ ಪ್ರಕಾರ ನಾನು ಆ ದಿನ ರಸ್ತೆಯ ಬಲಭಾಗಕ್ಕೆ ಬರುತ್ತಿದ್ದೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು

ಆ ದಿನ ರಸ್ತೆಯ ಎಡಭಾಗದಲ್ಲಿ ಬರುತ್ತಿದ್ದೆ ಎಂದು ಉತ್ತರಿಸಿರುತ್ತಾರೆ. ಪೊಲೀಸರ ನಕಾಶೆ ಪ್ರಕಾರ ನಾನು ಆ ದಿನ ರಾಂಗ್ ಸೈಡ್ ನಲ್ಲಿ ಇದ್ದೆನು ಎಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. ಅಪಘಾತವಾದ ರಸ್ತೆ ಸುಮಾರು 15-20 ಅಡಿ ಅಗಲ ಇರಬಹುದು. ನಕಾಶೆಯಲ್ಲಿ ಪೊಲೀಸರು ರಸ್ತೆಯ ಅಗಲ 10 ಅಡಿ ಎಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸಿರುತ್ತಾರೆ. ಸದರಿ ಕಾರು ರಸ್ತೆಯಲ್ಲಿ ಬರುವಾಗ ಎಡಭಾಗದಲ್ಲಿ ಹೋದರೆ ಇನ್ನೂ 3 ಅಡಿ ಜಾಗ ಬಲಭಾಗಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ನಾನು ಆ ದಿನ ರಸ್ತೆಯ ರಾಂಗ್ ಸೈಡಿನಲ್ಲಿ ಹೋಗಿರುತ್ತೇನೆ ಎಂದರೆ ಸರಿಯಲ್ಲ.

5. ಅಪಘಾತವಾದ ನಂತರ ನನ್ನನ್ನು ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಅಲ್ಲಿಂದ ನಂಜಪ್ಪ ಆಸ್ಪತ್ರೆ, ಶಿವಮೊಗ್ಗಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಅಪಘಾತದಿಂದ ನನಗೆ ಸಾಮಾನ್ಯ ಸ್ವರೂಪದ ಗಾಯಗಳು ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಅಪಘಾತದ ಪೂರ್ವದಲ್ಲಿ ಯಾವ ರೀತಿ ಕೆಲಸ ಮಾಡಲು ಸಮರ್ಥನಿದ್ದೇನೋ ಅದೇ ರೀತಿ ಈಗಲೂ ಸಹ ಸಮರ್ಥನಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಶಿವಮೊಗ್ಗದಲ್ಲಿ ಡಾ॥ಮೋಹನ್ ವಿನ್ಸೆಂಟ್ ರವರು ಚಿಕಿತ್ಸೆ ನೀಡಿರುತ್ತಾರೆ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳಲ್ಲಿ ಮುಂಗಡ ಪಾವತಿ ಮಾಡಿದ ಬಿಲ್ಲುಗಳನ್ನು ಸಹ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯರು ಹೇಳಿದ ರೀತಿ ಔಷಧಿ ಪಡೆದ ಬಗ್ಗೆ ವೈದ್ಯರು ನೀಡಿದ ಚೀಟಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ವೈದ್ಯಕೀಯ ಬಿಲ್ಲುಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಹೇಳಿದಷ್ಟು ವೈದ್ಯಕೀಯ ವೆಚ್ಚವನ್ನು ಭರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು 1 ನೇ ಎದುರುದಾರರ ತಪ್ಪಿನಿಂದ ಆಗದೇ ಇರುವ ಕಾರಣ 3 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು॥1 ನೇ ಎದುರುದಾರರ ಪರ ವಕೀಲರು 3 ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ॥ ಇಲ್ಲ॥

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು॥ ನ.ರಾ.ಪುರ.

ಸಾಕ್ಷಿದಾರರ ಸಹಿ ಃ